# ಪುಂಡರೀಕ ವರದ ಪಂಢರಿರಾಯನ ಕೇಳವ್ವ ಕೇಳೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 377.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ಶ್ರೀ ತಾಳ: ಆದಿ

ಪುಂಡರೀಕ ವರದ ಪಂಢರಿರಾಯನ ಕೇಳವ್ವ ಕೇಳೆ || ಪ ||

ಗೋಕುಲದೊಳಗೆ ತಾನಿಪ್ಪ, ಮೂರು ಲೋಕಕೆ ತಾನಪ್ಪ
ಕೊಳಲ ಧ್ವನಿಯ ಮಾಡುತಲಿಪ್ಪ, ನಮ್ಮ ತುರುಗಳ ಕಾಯುತಲಿಪ್ಪ || 1 ||

ವೃಂದಾವನದೊಳು ನಿಂದ, ನಂದನ ಕಂದ ಗೋವಿಂದ
ಕೊಳಲ ಧ್ವನಿ ಬಹು ಚಂದ, ಮೂಜಗವ ಪಾಲಿಪ ಮುಕುಂದ || 2 ||

ಸುರತರುವಿನ ನೆರಳಲ್ಲಿ, ಇವನ ಹೆಗಲಿನ ಮೇಲೆ ಕೊಡಲಿ
ನೆರೆದಿಹ ಗೋಪಿಯರಲ್ಲಿ, ಗೋಪಾಲರಾಡುತ ಲೀಲೆಗಳಲ್ಲಿ || 3 ||

ಕರ್ಪೂರ ವೀಳ್ಯವ ಮೆಲುವ, ನಮ್ಮ ಕಸ್ತೂರಿ ತಿಲಕ ಉಂಗುರವ
ಮುತ್ತಿನ ಒಲೆ ವರಚೆಲುವ, ವಿಸ್ತರದಿ ಹದಿನಾಲ್ಕು ಲೋಕ ಪೊರೆವ || 4 ||

ಹಿಮಕರಚರಣದ ಕರನ, ಮೂಜಗ ಪಾಲಿಪ ಕರುಣ
ಅಮರರಿಗೆ ಒಲಿದವನ, ನಮ್ಮ ಪುರಂದರ ವಿಠಲ ರಾಯನ || 5 ||

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, pundarika, gokula, loka, kolalu, govu, vrindavana, govinda, mukunda, sura, deva, gopi, Gopala, Kasturi, ungura, muttu, karuna,
**Pravachana:** NA
**Explanation:** NA